ಕರ್ನಾಟಕ ಸರ್ಕಾರ

ಕರ್ನಾಟಕ ಅರಣ್ಯ ಇಲಾಖೆ.

# ವಲಯ ಅರಣ್ಯಾಧಿಕಾರಿಗಳ ಕಛೇರಿ, ಪ್ರಾದೇಶಿಕ ವಲಯ ಹರಪನಹಳ್ಳಿ.

## OFFICE OF THE RANGE FOREST OFFICER, TERRITORIAL RANGE, HARAPANAHALLI.

Email:rfohphalli@gmail.com

ಸಂಖ್ಯೆ:ವ.ಅ.ಅ/ಹ.ಹಳ್ಳಿ/ ಲ್ಯಾಂಡ್ ಡೈವರ್ಷನ್/2019-20. ದಿನಾಂಕ:30-12-2019.

ರವರಿಗೆ,
ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ದಾವಣಗೆರೆ ಪ್ರಾದೇಶಿಕ ವಿಭಾಗ,
ದಾವಣಗೆರೆ.

ಮಾನ್ಯರೇ,

**(ಮಾನ್ಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ತಾಂತ್ರಿಕ ಸಹಾಯಕರು ದಾವಣಗೆರೆ ವಿಭಾಗ ದಾವಣಗೆರೆ)**

**ವಿಷಯ** :- Diversion of forest land in sy.no.1/A and 1/D of Uchangidurga Village, uchangidurga Reserve forest for M sand Stone quarry and approach road in favour of Annapoorna Stone Crusher, Partner T.Basappa-reg.

**ಉಲ್ಲೇಖ** :- 1. ಪ್ರಸ್ತಾವನೆ ಸಂಖ್ಯೆ:FP/KA/QRY/43207/2019. ದಿನಾಂಕ:07-12-2019.
2. ತಮ್ಮ ಕಛೇರಿ ಪತ್ರ ಸಂಖ್ಯೆ:ಬಿ4/ಲ್ಯಾಂಡ್/ಎಫ್.ಸಿ/ಸಿ.ಆರ್-/2019-20. ದಿನಾಂಕ: 18-12-2019.
3. ಉಪ ವಲಯ ಅರಣ್ಯಾಧಿಕಾರಿ ಹರಪನಹಳ್ಳಿ ಶಾಖೆ, ಹರಪನಹಳ್ಳಿ ಇವರ ವರದಿ ದಿನಾಂಕ:21-12-2019.

******************

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಟಿ.ಬಸಪ್ಪ ಬಿನ್ ಟಿ.ಸಿದ್ದಪ್ಪ ಅನ್ನಪೂರ್ಣ ಸ್ಟೋನ್ ಕ್ರಷರ್ ದಾವಣಗೆರೆ ಇವರು ಹರಪನಹಳ್ಳಿ ತಾಲ್ಲುಕು ಉಚ್ಚಂಗಿದುರ್ಗ ಮೀಸಲು ಅರಣ್ಯ ಪ್ರದೇಶದ, ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂಬರ್. 1/ಎ ಮತ್ತು 1/ಡಿ ವಿಸ್ತೀರ್ಣ 10.0956 ಹೆ.ನಲ್ಲಿ M-Sand ಕಲ್ಲು ಕ್ವಾರಿ ಮತ್ತು ಕೊಡುವ ರಸ್ತೆಗಳ ಸಲುವಾಗಿ ಅರಣ್ಯ ಭೂಮಿಯನ್ನು ಬಿಡುಗಡೆಗೊಳಿಸಲು ಕೋರಿ ಲಗತ್ತು ದಾಖಲೆಗಳೊಂದಿಗೆ ಉಲ್ಲೇಖ(2)ರಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತಾವನೆ ಪ್ರದೇಶವನ್ನು ಅರಣ್ಯ ಸಂರಕ್ಷಣೆ ಕಾಯ್ದೆ-1980 ಸೆಕ್ಷನ್-2ರ ಪ್ರಕಾರ ಸ್ಥಳ ವೀಕ್ಷಣೆ ಮಾಡಿ ಕಲ್ಲುಕ್ವಾರಿಗಾಗಿ ಅರಣ್ಯ ಭೂಮಿಯನ್ನು ಬಿಡುಗಡೆಗೊಳಿಸುವ ಬಗ್ಗೆ ನಿಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಸಲು ಉಲ್ಲೇಖ(1)ರಲ್ಲಿ ಸೂಚಿಸಿದ್ದು ಇರುತ್ತದೆ.

ಉಲ್ಲೇಖ(1)ರ ಪ್ರಸ್ತಾವನೆ ಪ್ರದೇಶಕ್ಕೆ ಸಂಬಂಧಿಸಿದಂತೆ ಸ್ಥಾನಿಕ ಪರಿಶೀಲನೆಮಾಡಿ ಉಪ-ವಲಯ ಅರಣ್ಯಾಧಿಕಾರಿಗಳು ಹರಪನಹಳ್ಳಿ ಶಾಖೆಯವರು ಉಲ್ಲೇಖ(3)ರಂತೆ ಈ ಕಛೇರಿಗೆ ವರದಿಸಿರುತ್ತಾರೆ. ಸದರಿಯವರ ವರದಿ ಮಾಡಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ದಾವಣಗೆರೆ ವಿಭಾಗ
30 DEC 2019

1. ಪ್ರಸ್ತಾವನೆಯಲ್ಲಿ M-Sand ಕಲ್ಲು ಕ್ವಾರಿ ಮತ್ತು ಕೊಡುವ ರಸ್ತೆಗೆ ಕೋರಿರುವ ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂಬರ್:1A.ರಲ್ಲಿಯ 10.55 (10.100+0.45)ಎಕರೆ ಪ್ರದೇಶವು ಉಚ್ಚಂಗಿದುರ್ಗ ಕಾಯ್ದಿಟ್ಟ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತಿದ್ದು, ಪ್ರಸ್ತಾಪಿತ ಪ್ರದೇಶವು ಕಲ್ಲುಬಂಡೆಗಳಿಂದ ಕೂಡಿದ್ದು, ಅಲ್ಲಲ್ಲಿ ಕುರುಚಲು ಗಿಡಗಳಿಂದ ಕೂಡಿರುತ್ತದೆ. ಯಾವುದೇ ಬೆಲೆ ಬಾಳುವ ಗಿಡಮರಗಳು ಪ್ರಸ್ತಾಪಿತ ಪ್ರದೇಶದಲ್ಲಿ ಕಂಡುಬಂದಿರುವುದಿಲ್ಲ. ಪ್ರಸ್ತಾಪಿತ ಪ್ರದೇಶವು ನಕಾಶೆಯಲ್ಲಿ ಗುರುತಿಸಿರುವಂತೆ,(ಜಿ.ಪಿ.ಎಸ್. ರೀಡಿಂಗ್‌ಗಳು) ಸರಿಯಿರುತ್ತದೆ.
2. ಪ್ರಸ್ತಾವನೆಯಲ್ಲಿ M-Sand ಕಲ್ಲುಕ್ವಾರಿ ಮತ್ತು ಕೊಡುವ ರಸ್ತೆಗೆ ಕೋರಿರುವ ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂಬರ್:1/ಡಿರ 8.34(8+0.34) ಎಕರೆ ಮತ್ತು 6.06(5.70+0.360) ಎಕರೆ ಪ್ರದೇಶವು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್-4ರಡಿ ಘೋಷಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆ. (ಸರ್ಕಾರದ ಅಧಿಸೂಚನೆ ಸಂಖ್ಯೆ:AHFF.436.FAF/21-10-1994. 46.00ಹೆಕ್ಟೇರ್ ಪ್ರದೇಶದಲ್ಲಿ) ಪ್ರಸ್ತಾಪಿತ ಪ್ರದೇಶವು ಕಲ್ಲುಬಂಡೆಗಳಿಂದ ಕೂಡಿದ್ದು ಯಾವುದೇ ಬೆಲೆಬಾಳುವ ಗಿಡಮರಗಳು ಕಂಡು ಬಂದಿರುವುದಿಲ್ಲ ಹಾಗೂ ಪ್ರಸ್ತಾಪಿತ ಪ್ರದೇಶವು ನಕಾಶೆಯಲ್ಲಿ ಗುರುತಿಸಿರುವಂತೆ ಸರಿಯಿರುತ್ತದೆ.
3. ಪ್ರಸ್ತಾವನೆಯಲ್ಲಿ ಪ್ರಸ್ತಾಪಿಸಿರುವ ಉಚ್ಚಂಗಿದುರ್ಗ ಗ್ರಾಮದ ಸರ್ವೆ ನಂಬರ್:1/A ಮತ್ತು 1/Dರ ಪ್ರದೇಶವು ಯಾವುದೇ ವನ್ಯಜೀವಿ ಅಭಯಾರಣ್ಯ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಗೆ ಒಳಪಡದೆ ರಂಗಯ್ಯನದುರ್ಗ ವನ್ಯಜೀವಿ ವಲಯದಿಂದ ಅಂದಾಜು 18.00KM. ದೂರದಲ್ಲಿರುತ್ತದೆ.

ಮುಂದು ಪುಟ.2.ಕ್ಕೆ.

4. ಪ್ರಸ್ತಾವನೆ ಸಲ್ಲಿಸಿರುವ ಪ್ರದೇಶಗಳಿಗೆ ಸಂಬಂಧಿಸಿದಂತೆ ಅರಣ್ಯ ಹಕ್ಕು ಕಾಯ್ದೆಯಡಿ ಗ್ರಾಮ ಅರಣ್ಯ ಹಕ್ಕು ಸಮಿತಿಯಡಿ ಅರ್ಜಿಸಲ್ಲಿಕೆಯಾಗಿರುವ ಬಗ್ಗೆ. ಸ್ಥಳೀಯ, ಮತ್ತು ಗ್ರಾಮಸ್ಥರಿಂದ ಮಾಹಿತಿ ಪಡೆದು ನೋಡಲಾಗಿ, ಸದರಿ ಸ್ಥಳಕ್ಕೆ ಸಂಬಂಧಿಸಿದಂತೆ ಯಾವುದೇ ಅರ್ಜಿಗಳು ಸಲ್ಲಿಕೆಯಾಗಿರುವುದಿಲ್ಲ.
5. ಪ್ರಸ್ತಾವನೆ ಸಲ್ಲಿಸಿರುವ ಪ್ರದೇಶವು ಕರ್ನಾಟಕ ಪುರಾತನ ಮತ್ತು ಚಾರಿತ್ರಿಕ ಸ್ಮಾರಕವಾದ ಶ್ರೀ ಉಚ್ಚಂಗೆಮ್ಮ ದೇವಸ್ಥಾನ ಶ್ರೀ ಕ್ಷೇತ್ರ ಉಚ್ಚಂಗಿದುರ್ಗದಿಂದ ಅಂದಾಜು 1kmಗೂ ಅಧಿಕ ದೂರದಲ್ಲಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳು ಸ್ಥಾನಿಕ ಪರಿಶೀಲನೆಯಿಂದ ಕಂಡುಬಂದಿದ್ದು ಮುಂದಿನ ಸೂಕ್ತ ಕ್ರಮಕ್ಕಾಗಿ ತಮ್ಮ ಅವಗಾಹನೆಗೆ ತರಬಯಸುತ್ತಾ ಗೌರವಪೂರ್ವಕವಾಗಿ ವರದಿಸಿದೆ.

ತಮ್ಮ ವಿಧೇಯ,

ವಲಯ ಅರಣ್ಯಾಧಿಕಾರಿ,
ಹರಪನಹಳ್ಳಿ ವಲಯ, ಹರಪನಹಳ್ಳಿ.